ದಿನಾಂಕ 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ದ್ವಿತೀಯ ಪಿಯುಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ವಾದಿಯ ಸಂಸ್ಥೆಗೆ 2010 ರಲ್ಲಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ಅದಕ್ಕೂ ಪೂರ್ವದಲ್ಲಿ ವಾದಿಯ ಸಂಸ್ಥೆಗೆ ಸೆಕ್ರೆಟರಿಯಾಗಿ ಯಾರು ಇದ್ದರು ಎಂದು ನನಗೆ ಗೂತ್ತಿಲ್ಲ. ನನ್ನ ಪೂರ್ವದಲ್ಲಿ ವಾದಿ ಸಂಸ್ಥೆಗೆ ಒಟ್ಟು 3 ಜನ ಸೆಕ್ರೆಟರಿಗಳು ಆಗಿರುತ್ತಾರೆ. ಅವರುಗಳಲ್ಲಿ ಕೊಟ್ಟೂರು ಮತ್ತು ಮಾರ್ಟಿನ್ ಆಗಿದ್ದು ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ. ವಾದಿ ಸಂಸ್ಥೆ ಸ್ಥಾಪನೆಯಾದ ನಂತರ ಇಲ್ಲಿಯವರೆಗೂ ಒಟ್ಟು 4 ಜನ ಅಧ್ಯಕ್ಷರು ಆಗಿರುತ್ತಾರೆ. ಸದರಿ ವಾದಿ ಸಂಸ್ಥೆಗೆ 2 ನೇ ಪ್ರತಿವಾದಿಯು ಮೂಲ ಸಂಸ್ಥಾಪಕರಾಗಿದ್ದರು. ವಾದಿ ಸಂಸ್ಥೆಯು 1985 ರಲ್ಲಿ ಪ್ರಾರಂಭಗೊಂಡಿರುತ್ತದೆ. 2 ನೇ ಪ್ರತಿವಾದಿಯು 1985 ರಿಂದ ಎಲ್ಲಿಯವರೆಗೂ ಅಧ್ಯಕ್ಷರಾಗಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ.

2. 1988 ನೇ ಸಾಲಿನಲ್ಲಿ 2 ನೇ ಪ್ರತಿವಾದಿ ಅಧ್ಯಕ್ಷರಾಗಿದ್ದರು. ವಾದಿ ಸಂಸ್ಥೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಅಡಿ ಸ್ಥಾಪನೆಯಾಗಿರುತ್ತದೆ ಎಂದರೆ ಸರಿ. ವಾದಿ ಸಂಸ್ಥೆಯ ವ್ಯವಹಾರಗಳು ಹಾವೇರಿ ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತವೆ ಎಂದರೆ ಸರಿ. ವಾದಿ ಸಂಸ್ಥೆಯ ವ್ಯವಹಾರಗಳ ಕುರಿತು ಪ್ರತಿ ವರ್ಷ ಲೆಕ್ಕಪರಿಶೋಧನೆಯಾಗುತ್ತದೆ ಎಂದರೆ ಸರಿ. ಲೆಕ್ಕ ಪರಿಶೋಧಕರು ಹಲವು ಬಾರಿ ಬದಲಾಗುತ್ತಾರೆ.

3. 1998 ರಿಂದ 2000 ದ ವರೆಗೆ ವಾದಿ ಸಂಸ್ಥೆಯ ಲೆಕ್ಕಪರಿಶೋಧಕರು ಯಾರು ಎಂದು ನನಗೆ ನೆನಪಿಲ್ಲ. ಸದರಿ ಸಮಯದಲ್ಲಿ ನಾನೇ ವಾದಿ ಸಂಸ್ಥೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಿರುತ್ತೇನೆ. ಸದರಿ ಅವಧಿಯ ಲೆಕ್ಕಪರಿಶೋಧನ ವರದಿ ಇದ್ದು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಹಣದ ಕುರಿತು ಲೆಕ್ಕಪರಿಶೋಧನೆ ಆಗಿರುತ್ತದೆ ಎಂದರೆ ಸರಿ. 1998 ರಿಂದ ವಾದಿ ಸಂಸ್ಥೆಯ ಪ್ಲಾಟ್ ಗಳು ಮಾರಾಟ ವಾಗಿರುವ ಮತ್ತು ಉಳಿದ ಪ್ಲಾಟ್ ಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ.

4. ದಾವಾ ಆಸ್ತಿಯನ್ನು ಮಾರಾಟ ಮಾಡಿದ ಹಣ ವಾದಿ ಸಂಸ್ಥೆಗೆ ಜಮಾ ಆಗಿರುವ ಕುರಿತು ನನಗೆ ಮತ್ತು 2 ನೇ ಪ್ರತಿವಾದಿಗೆ 1998 ನೇ ಸಾಲಿನಲ್ಲಿ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಲೆಕ್ಕಪರಿಶೋಧನಾ ವರದಿಯನ್ನು ನಾನೇ ನೋಡಿ ಸಹಕಾರ ನಿಬಂಧಕರಿಗೆ ಕಳುಹಿಸುತ್ತೇನೆ ಎಂದರೆ ಸರಿ. ದಾವಾ ಆಸ್ತಿ ಮಾರಾಟದ ಕುರಿತು ಸದರಿ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಕಾಣಿಸಿರುವುದಿಲ್ಲ. ಆ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ದಾವಾ ಆಸ್ತಿ ಮಾರಾಟವಾಗಿರುವ ಕುರಿತು ತಿಳಿದು ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಮಾರಾಟದ ಹಣ ಜಮಾ ಆಗದ ಕುರಿತು ನಾವು 1 ನೇ ಪ್ರತಿವಾದಿಗೆ ನಿಪಿ 8 ರಂತೆ ನೋಟೀಸ್ ನೀಡಿರುತ್ತೇವೆ.

5. ವಾದಿ ಸಂಸ್ಥೆಗೆ ಒಟ್ಟು 712 ಜನ ಸದಸ್ಯರು ಇರುತ್ತಾರೆ. ಜಮೀನುಗಳನ್ನು ಖರೀದಿಸಿ ಬಿನ್ ಶೇತ್ಕಿ ಮಾಡಿ ಪ್ಲಾಟುಗಳನ್ನು ಮಾರಾಟ ಮಾಡಲಾಗಿತ್ತು. ಸದರಿ ಜಮೀನುಗಳನ್ನು

ಖರೀದಿಸಿದ ದಿನಾಂಕ ನೆನಪಿಲ್ಲ ಆದರೆ ಒಟ್ಟು 5 ಸರ್ವೆ ನಂಬರ್ ಜಮೀನುಗಳನ್ನು ಖರೀದಿಸಿರುತ್ತೇವೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ ನಂ.3 ರಲ್ಲಿ ಬಿನ್ ಶೇತ್ಕಿ ಜಮೀನುಗಳನ್ನು ಖರೀದಿಸಿರುತ್ತೇವೆ ಎಂದು ಬರೆಸಿರುವ ವಿಷಯ ತಪ್ಪಿನಿಂದ ಕೂಡಿರುತ್ತದೆ. ಪ್ಲಾಟ್ ಗಳನ್ನು ಮಾರಾಟ ಮಾಡಲು ಪ್ರಾರಂಭಿಸಿದ ವರ್ಷ ಈಗ ನನಗೆ ನೆನಪಿಲ್ಲ. ಯಾವ ವರ್ಷ ಕೊನೆಯ ಪ್ಲಾಟ್ ನ್ನು ಮಾರಾಟ ಮಾಡಿರುತ್ತೇವೆ ಎಂದು ನನಗೆ ನೆನಪಿಲ್ಲ. ವಾದಿ ಸಂಸ್ಥೆಯ ಹೆಸರಿನಲ್ಲಿ ಈಗ ಯಾವುದೇ ಪ್ಲಾಟುಗಳು ಮಾರಾಟಕ್ಕೆ ಲಭ್ಯವಿಲ್ಲ. ನಾನು ಅಧ್ಯಕ್ಷನಾಗಿದ್ದ ಸಮಯದಲ್ಲಿ ಒಂದು ಪ್ಲಾಟನ್ನು ನನ್ನ ಸಹಿಯ ಮೂಲಕ ಮಾರಾಟ ಮಾಡಿದ್ದು ಉಳಿದ ಎಲ್ಲಾ ಪ್ಲಾಟುಗಳನ್ನು 2 ನೇ ಪ್ರತಿವಾದಿ ಸಹಿ ಮಾಡಿ ವಾದಿ ಪರ ಮಾರಾಟ ಮಾಡಿರುತ್ತಾರೆ.

6. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ವಾದಿ ಸಂಸ್ಥೆಗೆ ಅಧ್ಯಕ್ಷನಾಗಿದ್ದ ಬಗ್ಗೆ ಬರೆಸಿರುವುದಿಲ್ಲ. ಈ ದಾವೆಯನ್ನು ಹೊರತುಪಡಿಸಿ ಇನ್ನೊಂದು ಖರೀದಿ ಪತ್ರದ ಕುರಿತು ವಾದಿ ಸಂಸ್ಥೆ ದಾವೆಯನ್ನು ಹೂಡಿರುತ್ತದೆ. ಇನ್ನೊಂದು ದಾವೆ ಈಗಾಗಲೇ ಡಿಕ್ರಿಯಾಗಿರುತ್ತದೆ. ಬೈಲಾ ಪ್ರಕಾರ ಖರೀದಿ ಪತ್ರಗಳನ್ನು ಅಧ್ಯಕ್ಷರನ್ನು ಹೊರತುಪಡಿಸಿ ಬೇರೆ ಯಾರೂ ಬರೆದುಕೊಡಲು ಅಧಿಕಾರ ಇಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಸಹ ಅಧ್ಯಕ್ಷರೇ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 3 ನೇ ಪ್ರತಿವಾದಿಯು ವಾದಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ಮೋಸದಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ನಿಪಿ 3 ರ ಖರೀದಿ ಪತ್ರವನ್ನು ಬರೆಸಿಕೊಂಡಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಪತ್ರ ಮಾಡಿಕೊಟ್ಟಿರುವ ಕಾರಣ

ಪ್ರತಿವಾದಿಯನ್ನಾಗಿ ಮಾಡಿರುತ್ತೇವೆ. 2 ನೇ ಪ್ರತಿವಾದಿಯು ದಾಖಲೆಗಳನ್ನು ನೋಡದೇ 1 ನೇ

ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಟ್ಟಿರುವುದಾಗಿ ಈ ದಾವೆಯಲ್ಲಿ ಆರೋಪ ಮಾಡಿರುತ್ತೇವೆ ಎಂದರೆ ಸರಿ. ಆ ಕುರಿತು 2 ನೇ ಪ್ರತಿವಾದಿಯ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.